# ಫ್ಲೆಮಿಂಗೋ ತಪಸ್ಸು ಕಾಣಬನ್ನಿರೋ...



**ಸಹಸ್ರ ಸಂಖ್ಯೆಯಲ್ಲಿ ಒಂಟಿ ಕಾಲಿನಲ್ಲಿ ನಿಶ್ಚಲ ನಿಂತ ಫ್ಲೆಮಿಂಗೋಗಳು ಸರೋವರಕ್ಕೇ ತಿಳಿಗುಲಾಬಿಯ ಕೌದಿ ಹೊದಿಸಿದಂತೆ ಕಾಣುತ್ತದೆ. ಈ ಅಪೂರ್ವ ನೋಟವನ್ನು ನೋಡಲು ಕೀನ್ಯಾದ ಬೊಗೊರಿಯಾ ಸರೋವರಕ್ಕೆ ಭೇಟಿನೀಡಲೇಬೇಕು.**

**■ ಡಾ. ಸುಕನ್ಯಾ ಸೂನಗಹಳ್ಳಿ**

ದೂರದಿಂದ ನೋಡಿದರೆ ನೀರ ಮೇಲೆ ಬಿಸಿಲೂ ನುಸುಳದ ಹಾಗೆ ಕೆಂದಾವರೆಗಳು ಅರಳಿನಿಂತ ಹಾಗೆ ಕಾಣುತ್ತದೆ. ಕೊಂಚ ಹತ್ತಿರ ಹೋದಿರೋ ಕೆಂದಾವರೆಗಳು ಒಂಟಿ ಕಾಲಿನಲ್ಲಿ ಒತ್ತೊತ್ತಾಗಿ ತಪಸ್ಸಿಗೆ ನಿಂತ ಸಹಸ್ರ ಸಹಸ್ರ ಪಕ್ಷಿಗಳ ಧ್ಯಾನಸ್ಥಸ್ಥಿತಿ ಬೆರಗುಹುಟ್ಟಿಸುತ್ತದೆ. ಇನ್ನಷ್ಟು ಮುಂದುವರಿದಿರೋ ಆ ಧ್ಯಾನದೊಳಗಿನ ಅಲುಗಾಟಗಳು, ಶಿಸ್ತಿನ ನಿಯಮವನ್ನು ಉಲ್ಲಂಘಿಸಿ ಕತ್ತು ಮುರಿದು ಮೈ ಕೆರೆದುಕೊಳ್ಳುವ, ಪಕ್ಕ ನಿಂತವರನ್ನು ದೂಡಿ ಮೋಜು ನೋಡುವ, ಗಬಕ್ಕೆಂದು ನೀರೊಳಗೆ ಕತ್ತುಕುಕ್ಕಿ ಏನನ್ನೋ ಹೆಕ್ಕಿ ನುಂಗುವ ಪುಂಡ ಪೋಕರಿ ಫ್ಲೆಮಿಂಗೋಗಳ ಕಲರವಲೋಕ ತೆರೆದುಕೊಳ್ಳುತ್ತದೆ. ಮತ್ತಷ್ಟು ಮುನ್ನುಗ್ಗಿ ಹುಯಿಲೆಬ್ಬಿಸಿದಿರೋ ಕಾಲುದ್ದ ಮಾಡಿಕೊಂಡು ಚೂಪು ರೆಕ್ಕೆ ಬೀಸಿಕೊಂಡು, ಆಕಾಶವನ್ನು ಕದಡುವ ಸಮೂಹನರ್ತನವನ್ನೂ ಕಾಣಬಹುದು.

ಒಂದಲ್ಲಾ ಎರಡಲ್ಲಾ, ಸಾವಿರ.. ಅದೆಷ್ಟೋ ಸಾವಿರ ಫ್ಲೆಮಿಂಗೋಗಳನ್ನು ಒಟ್ಟೊಟ್ಟಿಗೇ ನೋಡುವುದೇ ಒಂದು ವಿಸ್ಮಯಕಾರಿ ಗಳಿಗೆ. ಆ ಗಳಿಗೆಯನ್ನು ಅನುದಿನವೂ ಮೊಗೆದುಕೊಡುವ ಸರೋವರ ಬೊಗೊರಿಯಾ. ಕಣ್ಣು ಹಾಯಿಸಿದಷ್ಟೂ ಉದ್ದ ನೀಲಿ ನೀಲಿ ನೀರಿನ ಹೊಳಪನ್ನು ಮನದೊಳಗೂ ತುಂಬಿಕೊಂಡು 'ಹಕ್ಕಿ ಹಾರುತಿದೆ ನೋಡಿದಿರಾ..' ಎಂದು ಗುನುಗಿಕೊಳ್ಳಲು ನೀವು ಕೀನ್ಯಾ ದೇಶಕ್ಕೆ ಹಾರಲೇಬೇಕು.

## ಎಲ್ಲಿದೆ ಬೊಗೊರಿಯಾ?

ಪಶ್ಚಿಮ ಏಷ್ಯಾದ ಲೆಬನಾನ್‌ನ ಭೇಖಾ ಕಣಿವೆಯಿಂದ ಹಿಡಿದು ಆಗ್ನೇಯ ಆಫ್ರಿಕಾದಲ್ಲಿರುವ ಮೊಝಾಂಬಿಕ್ಯು ದೇಶದವರೆಗೆ ಸುಮಾರು 6,000 ಕಿಲೋಮೀಟರ್ ದೂರ ಹಬ್ಬಿರುವ ಕಣಿವೆಗೆ ಗ್ರೇಟ್ ರಿಫ್ಟ್ ಕಣಿವೆ ಎಂದು ಹೆಸರು. ಈ ಕಣಿವೆ ಅಪರೂಪದ ಜೀವವೈವಿಧ್ಯ ಮತ್ತು ನಿಸರ್ಗಸಂಪತ್ತಿನ ಆಗರ. ಕಿನ್ಯಾದ ಮೂಲಕವೂ ಹಾದು ಹೋಗುವ ಈ ಕಣಿವೆಯ ನಡುವಿನ ಸೆರಗಿನ ಮರೆಯಲ್ಲಿನ ಅನರ್ಘ್ಯ ರತ್ನ ಬೊಗೊರಿಯಾ ಸರೋವರ.

ಬೊಗೊರಿಯಾ ಸರೋವರ ಇರುವುದು ಕೀನ್ಯಾ ದೇಶದ ನಕೂರು ಕೌಂಟಿಯಲ್ಲಿದೆ. ದಕ್ಷಿಣಕ್ಕೆ 25 ಕಿಲೋಮೀಟರ್ ದೂರದಲ್ಲಿ ಬೊರಿಂಗೊ ಎಂಬ ಇನ್ನೊಂದು ಸರೋವರವೂ ಇದೆ. ಸಮುದ್ರಮಟ್ಟದಿಂದ 990 ಮೀಟರ್ ಎತ್ತರದಲ್ಲಿರುವ ಈ ಸರೋವರ ರಾಜಧಾನಿ ಕೀನ್ಯಾ ನೈರೋಬಿಯಿಂದ 240 ಕಿ.ಮೀ. ದೂರ. ಈ ಉಪ್ಪುನೀರಿನ ಸರೋವರ 34 ಕಿ.ಮೀ. ಉದ್ದಕ್ಕೆ ಚಾಚಿಕೊಂಡಿದೆ ಮತ್ತು ಮೂರೂವರೆ ಕಿ.ಮೀ ಅಗಲಕ್ಕೆ ಹರಡಿಕೊಂಡಿದೆ. ಸರೋವರದ ಸುತ್ತಮುತ್ತ ಮತ್ತು ದಡದಲ್ಲಿ ಹಲವು ಬಿಸಿನೀರಿನ ಬುಗ್ಗೆಗಳಿವೆ. ಸುಮಾರು ಐದು ಮೀಟರ್ ಎತ್ತರಕ್ಕೆ ಚಿಮ್ಮುವ ಆ ನೀರಿನ ಚಿಲುಮೆಗಳನ್ನು ನೋಡುವುದೇ ಒಂದು ವಿಶೇಷ ಅನುಭವ. ಸರೋವರದ ಸುತ್ತಲು ಸುಮಾರು 200ಕ್ಕೂ ಹೆಚ್ಚು ಬಿಸಿನೀರಿನ ಬುಗ್ಗೆಗಳಿವೆಯೆಂದು ಅಂದಾಜಿಸಲಾಗಿದೆ. 1973ರಲ್ಲಿ ಈ ಸರೋವರವನ್ನು ರಾಷ್ಟ್ರೀಯ ಸಂರಕ್ಷಿತ ಪ್ರದೇಶ ಎಂದು ಘೋಷಿಸಲಾಗಿದೆ.

ಈ ಸರೋವರಕ್ಕೆ ಕಳೆಗಟ್ಟುವುದು ಕೆಂದಾವರೆಯಂಥ ಫ್ಲೆಮಿಂಗೋಗಳಿಂದ. ಸಾವಿರಾರು ಸಂಖ್ಯೆಯಲ್ಲಿ ಸಮೂಹವಾಸ ನಡೆಸುವ ಈ ಹಕ್ಕಿಗಳು ಅಮೆರಿಕ, ಅರೆಬಿಯನ್, ಆಫ್ರಿಕಾ, ಏಷ್ಯಾ ಮತ್ತು ಯೂರೋಪ್‌ಗಳಲ್ಲಿ ಕಂಡುಬರುತ್ತವೆ. ಜಗತ್ತಿನಲ್ಲಿಯೇ ಹೆಚ್ಚು ಫ್ಲೆಮಿಂಗೋಗಳು ಕಂಡುಬರುವ ಸ್ಥಳಗಳಲ್ಲಿ ಆಫ್ರಿಕಾ ಖಂಡದ ಕೀನ್ಯಾದ ಬೊಗೊರಿಯಾ ಸರೋವರವೂ ಒಂದು.

ಬೊಗೊರಿಯಾ ಸರೋವರ ಫ್ಲೆಮಿಂಗೋಗಳಿಗೆ ವಾಸಕ್ಕೆ ಅನುಕೂಲಕರವಾದ ಹವಮಾನ ಮತ್ತು ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಹಾಗಂತ ಬರೀ ಫ್ಲೆಮಿಂಗೋಗಳಷ್ಟೇ ಅಲ್ಲ, ಲಿಟಲ್ ಗ್ರೆಬೇ, ಪ್ರಾಟಿನ್ ಸೋಲ್, ಲಿಟಲ್ ಬೀ ಈಟರ್, ಆಫ್ರಿಕನ್ ಸ್ಪೂನ್ ಬಿಲ್, ಹಾನ್‌ಬಿಲ್, ಗ್ರೇಟ್ ಟಿಟ್ ಮುಂತಾದ ಪಕ್ಷಿಗಳು ಕಾಣಸಿಗುತ್ತವೆ. ವರ್ಷದ ಯಾವುದೇ ಸಮಯದಲ್ಲಿ ಹೋದರೂ ಇಲ್ಲಿ ಫ್ಲೆಮಿಂಗೋಗಳ ದರ್ಶನ ಪಡೆಯಬಹುದು. ಆದರೆ ಕಾಲಮಾನಕ್ಕೆ ಅನುಗುಣವಾಗಿ ಅವುಗಳ ಸಂಖ್ಯೆಯಲ್ಲಿ ಹೆಚ್ಚುಕಮ್ಮಿ ಆಗುತ್ತಿರುತ್ತದೆ.